Ref.No.103/2023

WW-1,

**ದಿನಾಂಕಃ 10.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**1 ನೇ ಪಾರ್ಟಿ ಪರವಾಗಿಃ ಶ್ರೀ SN ವಕೀಲರಿಂದ ಮುಖ್ಯ ವಿಚಾರಣೆಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿನ ಎಲ್ಲಾ ವಿಚಾರಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇದೆ.

ಆದ್ದರಿಂದ ಕ್ಲೇಂ ಅರ್ಜಿಯಲ್ಲಿ ಕೇಳಿದಂತೆ ಆದೇಶಿಸಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ- 2 ನೇ ಪಾರ್ಟಿ ಪರವಾಗಿಃ ಶ್ರೀ.CKM ವಕೀಲರಿಂದ**

ದಿಃ12.02.2020 ರಂದು ನಾನು ವಾಹನ ಸಂಖ್ಯೆ ಕೆಎ-13-ಎಫ್-1736 ನಲ್ಲಿ ಬೆಳವಾಡಿ-ಹೊಳೆನರಸೀಪುರ ಮಾರ್ಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರಬೇಕಾದರೆ ಬಸ್ಸಿನಲ್ಲಿ 5 ಜನ ಪ್ರಯಾಣಿಕರು ಇದ್ದರು ಎಂದರೆ ಸರಿ. ಹಾಗಿರಬೇಕಾದರೆ ತಪಾಸಣಾಧಿಕಾರಿಗಳು ಬಸ್ಸನ್ನು ಬೆಳವಾಡಿ-ಜೋಡಿಜಿಬ್ಬಿ ಮಾರ್ಗದ ಮಧ್ಯೆ ಫಾರೆಸ್ಟ್ ಕ್ರಾಸ್ ಬಳಿ ತಪಾಸಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಕಾರಹಳ್ಳಿಯಲ್ಲಿ ತಪಾಸಣೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ತಪಾಸಣಾಧಿಕಾರಿಗಳು ಟಿಕೆಟ್ ರಹಿತ ಪ್ರಯಾಣಿಕರಿಂದ ಹೇಳಿಕೆಯನ್ನು ಪಡೆದು ಅವರ ಸಹಿ ಮತ್ತು ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಟಿಕೆಟ್ ರಹಿತ ಪ್ರಯಾಣಿಕರಿಂದ ದಂಡ ವಸೂಲಿ ಮಾಡಿ ಅವರ ಸಹಿಯನ್ನು ಮತ್ತು ನನ್ನ ಸಹಿಯನ್ನು ದಂಡ ರಶೀದಿಯಲ್ಲಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ನನ್ನ ಮೇಲಿನ ಆರೋಪ ರುಜುವಾತಾಗಿದ್ದರಿಂದ ಸಂಸ್ಥೆಗೆ ವಂಚಿಸಲು ಯತ್ನಿಸಿದ್ದೇನೆ ಎಂದು ನಿಖರವಾಗಿ ಕಂಡು ಬರುತ್ತದೆ ಎಂದರೆ ಸರಿಯಲ್ಲ. ಆದುದರಿಂದ ನಾನು ಗಂಭೀರವಾದ ಕರ್ತವ್ಯ ಲೋಪ ಎಸಗಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ನನ್ನ ಕ್ಲೇಂ ಅರ್ಜಿಯಲ್ಲಿ ಕೇಳಿರುವ ಪರಿಹಾರಕ್ಕೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು,
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.